# ಯಾರೇ ಬಂದವರು ಮನೆಗೆ ಮತ್ತ್ಯಾರೇ ಬಂದವರು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 487
2. **Note:** Singer has followed these lyrics.

ರಾಗ: ಸೌರಾಷ್ಟ್ರ                    ತಾಳ: ಅಟ

ಯಾರೇ ಬಂದವರು ಮನೆಗೆ ಮ-
ತ್ತ್ಯಾರೇ ಬಂದವರು        || ಪ ||

ನಾರಾಯಣ ಕೃಷ್ಣನಾಥನಲ್ಲದೆ ಬೇರೆ     || ಅಪ ||

ವಜ್ರರೇಖೆಗಳಿವೆ ಮನೆಯಲ್ಲಿ, ಕಾಲ
ಗೆಜ್ಜೆ ಧ್ವನಿ ಕೇಳಿ ಬರುತಿದೆ
ವಜ್ರ ಮಾಣಿಕ್ಯವೆಲ್ಲ ಹರಿದು ಬಿದ್ದಿವೆ
ಮಜ್ಜಿಗೆಯೊಳಗೆ ಕಾಣ್ವ ಬೆಣ್ಣೆಯ ಕಾಣೆ     || 1 ||

ಕೊಂಬು ಕೊಳಲು ರಭಸಗಳಿವೆ, ಕ-
ದಂಬ ಕಸ್ತೂರಿ ಪಂಪೆಸೆದಿವೆ
ಪೊಂಬಟ್ಟೆ ಚಲ್ಲಣ ಚೆಲ್ಲಿದೆ ಹಾಲು
ಕುಂಭ ಒಡೆಯೆ ಮನೆ ತುಂಬ ಬೆಳ್ಳಗಾಯಿತು     || 2 ||

ಮಿಂಚು ಹುಳದಂತೆ ಹೊಳೆವುತ, ತಮ್ಮ
ಸಂಚರರೊಡಗೂಡಿ ಚಲಿಸುತ್ತ
ವಂಚಿಸಿ ಬೆಣ್ಣೆಯ ಮೆಲ್ಲುತ್ತ, ನಮ್ಮ
ಲಂಚದ ಪುರಂದರ ವಿಠಲನಲ್ಲದೆ ಬೇರೇ     || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಪೊಂಬಟ್ಟೆ** = ಪೀತಾಂಬರ

**ಚಲ್ಲಣ** = ಚಡ್ಡಿ, ಚೊಣ್ಣ

**ವಜ್ರ-ರೇಖೆ** = ಹರಿಯ ಪಾದದಲ್ಲಿ ಈ ಆಕೃತಿಯ ರೇಖೆಗಳು ಇರುತ್ತವೆಂದು ಹೇಳುತ್ತಾರೆ.

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** mane, vajra, gejje, halu, benne, Kasturi,
**Pravachana:** NA
**Explanation:** NA